

ಒಂದು ಊರಿನಲ್ಲಿ ಒಬ್ಬ ಬಹಳ ಪ್ರಸಿದ್ಧ ನಾದಸ್ವರ ವಾದ್ಯಗಾರನಿದ್ದನು. ಅವನು ವಾದ್ಯವನ್ನು ಊದುತ್ತಾ ಊರೂರು ತಿರುಗುತ್ತಿದ್ದನು. ಅವನ ನಾದಸ್ವರವನ್ನು ಕೇಳಲು ಸುತ್ತಮುತ್ತಲ ಊರಿನ ಜನರೆಲ್ಲರೂ ಸೇರಿ ಬರುತ್ತಿದ್ದರು. ಅವನ ವಾದ್ಯದ ಮಾಯೆಗೆ ಜನರು ತಲೆ ಅಡ್ಡಾಡಿಸುತ್ತಾ ಮಂತ್ರಮುಗ್ಧರಾಗುತ್ತಿದ್ದರು. ಹೀಗೆ ಹೀಗೆ ಅವನಿಗೆ ತನ್ನ ವಾದ್ಯದ ಮೇಲಿನ ಗರ್ವ ತಲೆಗೆ ಹತ್ತಿತು.

ಒಂದು ದಿನ ಅವನು ರಾಜನ ಅರಮನೆಗೆ ಹೋಗಿ,

“ಎಲ್ಲ ಊರುಗಳಲ್ಲಿ ನನ್ನ ಎದುರು ವಾದ್ಯ ಊದಿ ಗೆಲ್ಲುವವರು ಯಾರಾದರೂ ಇದ್ದರೆ ಮುಂದೆ ಬರಲಿ”

ಎಂದು ಪಂಥಕ್ಕೆ ಆಹ್ವಾನಿಸಿದನು. ಆದರೆ ಯಾರೂ ಮುಂದೆ ಬರಲಿಲ್ಲ.

ಆಗ ಅಲ್ಲಿ ಒಂದು ಸಣ್ಣ ಹುಡುಗ ಮುಂದೆ ಬಂದು,

“ನಾನು ನಿಮ್ಮನ್ನು ವಾದ್ಯ ಊದದೇ ಸೋಲಿಸುವೆ!”

ಎಂದು ಧೈರ್ಯವಾಗಿ ಹೇಳಿದನು. ವಾದ್ಯಗಾರನು ನಗುತ್ತಾ,

“ನಿನ್ನ ವಾದ್ಯಕ್ಕೆ ಸಿದ್ಧತೆ ಮಾಡಿಕೊ”ಎಂದು ಹೇಳಿದನು.

ಆದರೆ ಆ ಹುಡುಗ ಖಾಲಿ ಕೈಯಲ್ಲೇ ಬಂದು ನಿಂತನು.

ವಾದ್ಯಗಾರನು ನಾದಸ್ವರವನ್ನು ಸುಶ್ರಾವ್ಯವಾಗಿ ಊದಲು ಪ್ರಾರಂಭಿಸಿದನು. ಜನರೆಲ್ಲರೂ ಅವನ ವಾದ್ಯದ ತಾಳಕ್ಕೆ ತಲೆ ಆಡಿಸುತ್ತಿದ್ದರು. ಅಷ್ಟರಲ್ಲಿ ಆ ಹುಡುಗನು ತನ್ನ ಜೇಬಿನಿಂದ ಒಂದು ಹುಣಸೆ ಹಣ್ಣನ್ನು ತೆಗೆದು, ಅದನ್ನು ವಾದ್ಯಗಾರನಿಗೆ ತೋರಿಸುತ್ತಾ ಅವನ ಹತ್ತಿರ ಹೋಗಿ ನಿಧಾನವಾಗಿ ತಿನ್ನಲು ಶುರುಮಾಡಿದನು.

ಅದನ್ನು ನೋಡಿದ ವಾದ್ಯಗಾರನ ಬಾಯಲ್ಲಿ ನೀರು ಸುರಿಯಲು ಆರಂಭವಾಯಿತು. ಹುಣಸೆಯ ಹುಳಿಯ ನೆನಪು ಅವನ ಮನಸ್ಸನ್ನು ಆವರಿಸಿತು. ಅವನ ಬಾಯಲ್ಲಿ ಎಂಜಲು ತುಂಬಿ ಅದು ವಾದ್ಯದೊಳಗೆ ಸೇರಿ ಅವನಿಗೆ ಸ್ವರ ಹೊರಡಿಸಲು ಆಗಲಿಲ್ಲ. ಅವನು ಬೇಸರದಿಂದ,

“ನನಗೆ ಈಗ ವಾದ್ಯ ಊದಲು ಸಾಧ್ಯವಿಲ್ಲ. ಮೊದಲು ಆ ಹುಡುಗನನ್ನು ಇಲ್ಲಿಂದ ಹೊರಗೆ ಕಳಿಸಿ” ಎಂದು ಹೇಳಿದನು.

ಆಗ ಆ ಹುಡುಗ ಶಾಂತವಾಗಿ ಹೇಳಿದನು,
“ನೀವು ನಾನು ನಿಮ್ಮನ್ನು ಸೋಲಿಸಿದ್ದೇನೆ ಎಂದು ಒಪ್ಪಿಕೊಂಡರೆ, ನಾನು ಹೊರಗೆ ಹೋಗುತ್ತೇನೆ”
ಎಂದು.
ಕೊನೆಗೆ ವಾದ್ಯಗಾರ ತನ್ನ ಸೋಲನ್ನು ಒಪ್ಪಿಕೊಂಡು ಆ ಹುಡುಗನಿಗೆ ಕೈಮುಗಿದನು.
ಅಂದಿನಿಂದ ಇಂದಿಗೂ ಜನರು ಹೇಳುತ್ತಾರೆ
ಇಂದಿಗೂ ವಾದ್ಯಗಾರರ ಮುಂದೆ ಯಾರಾದರೂ ಹುಳಿ ಅಥವಾ ಮಾವಿನಕಾಯಿ ತಿಂದರೆ, ಅವರನ್ನು ಹೊರಗೆ ಕಳುಹಿಸುತ್ತಾರೆ ಎಂದು ಹೇಳುತ್ತಾರೆ.

ನೀತಿ
ಅತಿಯಾದ ಗರ್ವವು ಜ್ಞಾನವನ್ನೂ ಕೌಶಲ್ಯವನ್ನೂ ಮಸುಕಾಗಿಸುತ್ತದೆ.
ಬುದ್ಧಿಯ ಮುಂದೆ ಶಕ್ತಿಯೂ ಪ್ರತಿಭೆಯೂ ಸೋಲುತ್ತದೆ.
ನಿಜವಾದ ಜಯವು ಬಲದಲ್ಲಲ್ಲ, ವಿವೇಕದಲ್ಲಿ ಇದೆ.